# ಪಕ್ಕಾ ಯೋಜನೆ



ಒಂದು ಊರಿನಲ್ಲಿ ದಾಸಯ್ಯನೆಂಬ ಪಿಸುಣಾರಿ ಇದ್ದನು. ಒಂದು ಸಾರಿ ಆತನಿಗೆ ಹಣದ ಅವಶ್ಯಕತೆ ಉಂಟಾಯಿತು. ಬಡ್ಡಿ ವ್ಯಾಪಾರಿ ಹತ್ತಿರ ಹೋಗಿ ಹಣದ ಸಾಲ ಕೊಡಬೇಕೆಂದು ಕೇಳಿದನು. ಏನಾದರೂ ಅಡವಿಟ್ಟುಕೊಳ್ಳದೆ ಹಣ ಕೊಡುವುದಿಲ್ಲ ಎಂದನು ಬಡ್ಡಿ ವ್ಯಾಪಾರಿ. ಆಗ ದಾಸಯ್ಯ ಮನೆಯಲ್ಲಿದ್ದ ಒಂದು ದೊಡ್ಡ ಕತ್ತಿಯನ್ನು ತೆಗೆದುಕೊಂಡು ಹೋಗಿ 'ಇದು ನಮ್ಮ ತಾತ, ಮುತ್ತಾತರ ಕಾಲದ ವಂಶಪಾರಂಪರ್ಯವಾಗಿ ಬಂದ ಎಷ್ಟೋ ಬೆಲೆಬಾಳುವ ಕತ್ತಿ. ಇದರ ಮೇಲೆ ಒಂದು ಸಾವಿರ ರೂಪಾಯಿಗಳನ್ನು ಕೊಡು' ಎಂದು ಕೇಳಿದ. ದಾಸಯ್ಯನಿಗೆ ಕೂಡಲೇ ಹಣ ಕೊಟ್ಟು ಕಳುಹಿಸಿದ ವ್ಯಾಪಾರಿ.

ವರ್ಷ ಕಳೆದರೂ ಬಾಕಿ ಹಣವನ್ನು ಕೊಟ್ಟು ಕತ್ತಿ ತೆಗೆದುಕೊಂಡು ಹೋಗಲಿಲ್ಲ ದಾಸಯ್ಯ. ಜುಗ್ಗ ದಾಸಯ್ಯ ತನಗೆ ಮೋಸ ಮಾಡಿದನೆಂದು ಗ್ರಹಿಸಿದ ಬಡ್ಡಿ ವ್ಯಾಪಾರಿ ತನ್ನ ಸ್ನೇಹಿತನಾದ ಶಿವಯ್ಯನೊಂದಿಗೆ ಹೀಗೆಂದನು 'ನಿನಗೊಂದು ರಹಸ್ಯ ಹೇಳುತ್ತೇನೆ, ಯಾರಿಗೂ ಹೇಳಬೇಡ, ದಾಸಯ್ಯ ಎಷ್ಟೋ ಬೆಲೆಬಾಳುವ ಕತ್ತಿಯನ್ನು ತೆಗೆದುಕೊಂಡು ಬಂದು ನನ್ನ ಹತ್ತಿರ ಅಡವಿಟ್ಟು ಹೋಗಿದ್ದಾನೆ. ಅದನ್ನು ರಾತ್ರಿ ಕಳ್ಳರು ಕದ್ದುಕೊಂಡು ಹೋಗಿದ್ದಾರೆ. ಈ ವಿಷಯ ತಿಳಿದರೆ ಜುಗ್ಗ ದಾಸಯ್ಯ ಎರಡರಷ್ಟು ಹಣ ವಸೂಲು ಮಾಡದೆ ಬಿಡನು. ಏನು ಮಾಡಬೇಕೆಂಬುದು ಅರ್ಥವಾಗದು' ಎಂದು ಹೇಳಿದನು.

ಶಿವಯ್ಯ ನೇರವಾಗಿ ಹೋಗಿ ಈ ವಿಷಯವನ್ನು ದಾಸಯ್ಯಗೆ ಹೇಳಿದನು. ಇದೇ ಸರಿಯಾದ ಸಮಯವೆಂದು ದಾಸಯ್ಯ ನಾಲ್ಕು ಜನರನ್ನು ಹಿಂದಿಟ್ಟುಕೊಂಡು ಹೋಗಿ 'ಸಾವಿರ ರೂಪಾಯಿಗಳು ಮತ್ತು ಬಡ್ಡಿ ತಂದಿದ್ದೇನೆ. ನನ್ನ ಕತ್ತಿ ನನಗೆ ಕೊಡು' ಎಂದು ದಬಾಯಿಸಿದಾಗ ಆ ಬಡ್ಡಿ ವ್ಯಾಪಾರಿ ಹಣ ತೆಗೆದುಕೊಂಡು 'ತಗೋ ನಿನ್ನ ಕತ್ತಿ' ಎಂದು ಕೂಡಲೇ ದಾಸಯ್ಯಗೆ ಕೊಟ್ಟುಬಿಟ್ಟನು, ಕತ್ತಿ ಹೋಯಿತೆಂದು ದಬಾಯಿಸಿ ಎರಡರಷ್ಟು ಹಣ ವಸೂಲು ಮಾಡಬೇಕೆಂದು ಆಶೆಯಿಂದ ಹೋದ ದಾಸಯ್ಯನಿಗೆ ನಿರಾಶೆಯಾಯಿತು. ಆತನ ಪರಿಸ್ಥಿತಿಯನ್ನು ಗಮನಿಸಿದ ಬಡ್ಡಿ ವ್ಯಾಪಾರಿ ತನ್ನ 'ಪಕ್ಕಾ ಯೋಜನೆ' ಫಲಿಸಿತೆಂದು ಮುಸಿ ಮುಸಿ ನಕ್ಕನು. ಇಂಗು ತಿಂದ ಮಂಗನಂತೆ ದಾಸಯ್ಯ ನಿರಾಶೆಯಿಂದ ಅಲ್ಲಿಂದ ಹೊರಟುಹೋದ.

**-ಎಂ.ಬಿ. ರಂಗಪ್ಪಶೆಟ್ಟಿ ಮೋಕಾ, ಬಳ್ಳಾರಿ**

# ಹೊರಗಿನ ತಿಂಡಿ ಬೇಡಪ್ಪ



ಅಪ್ಪಾ ಅಪ್ಪಾ ನೀನು ನನ್ನಪ್ಪಾ
ನಿನ್ನ ಮುದ್ದಿನ ಕಂದ ನಾನಪ್ಪ
ನಂಗೆ ತುಂಬಾ ಹೊಟ್ಟೆ ಹಸಿವಪ್ಪ
ಎರಡೇ ದೋಸೆ ನೀ ಮಾಡಿಕೊಡಪ್ಪ
ಬನ್ನು ಬ್ರೆಡ್ ನಂಗೆ ಬೇಡಪ್ಪ
ಕರಿದ ಎಣ್ಣೇ ತಿಂಡಿ ಬೇಡಪ್ಪ
ಎರಡೇ ದೋಸೆ ನೀ ಮಾಡಿಕೊಡಪ್ಪ
ಅದನೇ ಹೊಟ್ಟೇ ತುಂಬ ತಿನ್ನುವೆ ಅಪ್ಪ
ಪಿಜ್ಜಾ ಬರ್ಗರ್ ಬಯಸೆನಪ್ಪ
ಕೋಲಾ ಪೆಪ್ಸಿ ಕುಡಿಯೆನಪ್ಪಾ
ಉಪ್ಪಿಟ್ಟು ಸಜ್ಜಿಗೆ ನೀಡಪ್ಪಾ
ಸಂತಸದಿಂದ ತಿನ್ನುವೆ ಅಪ್ಪ
ನೂಡಲ್ಸ್, ಗೋಬಿ ಮಂಚೂರಿ ದುಬಾರಿ ಅಪ್ಪ
ಕುರುಕುರೆ ಬಿಂಗೋ ನಾ ತಿನ್ನಲಾರೆ ಅಪ್ಪಾ
ಇಡ್ಲಿ ಸಾಂಬಾರ್ ಇರಲಿ ಅಪ್ಪ
ಹಣ್ಣು ಹಾಲು ಇರಲಿ ಅಪ್ಪ
ಫ್ರೆಂಡ್ಸ್ ಎಲ್ಲೂ ಜಂಕ್ ಫುಡ್ ತಿಂತಾರೆ ಅಪ್ಪ
ತಿಂದ ಮೇಲೆ ಹೊಟ್ಟೆ ನೋವಿಗೆ ಅಳ್ತಾರೆ ಅಪ್ಪಾ
ಬೇಲ್ಪುರಿ ಮಸಾಲೆ ಪುರಿ ಬಲು ರುಚಿಯಪ್ಪಾ
ತಿಂದ ಮೇಲೆ ನಮ್ಮ ಆರೋಗ್ಯ ಹಾಳಪ್ಪ
ಬಾಯಿರುಚಿ ತಿಂಡಿಗಳು ನಂಗೆ ಬೇಡಪ್ಪ
ಚಿತ್ರಾನ್ನ ಮೊಸರನ್ನ ಬಹಳ ಒಳ್ಳೇದಪ್ಪಾ
ಹೊರಗಿನ ತಿಂಡಿ ಬಲು ಬೇಜಾರಪ್ಪಾ
ಅಮ್ಮನ ಕೈ ಅಡುಗೆ ಬಲು ರುಚಿಯಪ್ಪಾ

**-ಕೃತಿಕ್ ಶ್ರೀನಿವಾಸ್, ಬೆಂಗಳೂರು**